ಲಗುಬಗೆಯಲ್ಲಿ ಪಳಗುತ್ತಾ ಹೋದರು. ಆಮೇಲೆ ಅವರು ವಿಶ್ವ ಚಾಂಪಿಯನ್ ಆದರು.

ಸ್ವೀಟಿ ಓದಿನಲ್ಲಿ ಮುಂದಿದ್ದ ಹುಡುಗಿ. ತಂದೆ ಕೃಷಿಕರು. ಅವರಿಗೂ ಆಟದಲ್ಲಿ ಒಲವಿತ್ತು. ಮೊದಲು ಮಗಳು ಕಬಡ್ಡಿ ಆಡುವುದನ್ನು ನೋಡಿ ಅವರು ಖುಷಿಪಟ್ಟಿದ್ದರು. ಹರಿಯಾಣ ರಾಜ್ಯದ ಕಬಡ್ಡಿ ತಂಡಕ್ಕೂ ಮಗಳು ಆಯ್ಕೆಯಾದಳು. ರಾಷ್ಟ್ರೀಯ ಜೂನಿಯರ್ ಸ್ಪರ್ಧೆ ನಡೆಯುವ ದಿನವೇ ಬೋರ್ಡ್ ಪರೀಕ್ಷೆ ಇದ್ದಿದ್ದರಿಂದ ಹೋಗಲು ಆಗಿರಲಿಲ್ಲ.

ಸಣ್ಣ ಅಲ್ಪವಿರಾಮವಷ್ಟೆ. ಈ ಸಲ ಸ್ವೀಟಿ ಕಬಡ್ಡಿ ಆಟ ಬಿಟ್ಟರು. ಬಾಕ್ಸಿಂಗ್ ಗ್ಲೌವ್ಸ್ ತೊಟ್ಟರು. ತಂದೆಯೇ 'ಬಾಕ್ಸರ್ ಆಗು' ಎಂದು ಅದಾವುದೋ ಕ್ಷಣದಲ್ಲಿ ಕಿವಿಮಾತು ಹೇಳಿದ್ದು. 2009ರಿಂದ ಬಾಕ್ಸಿಂಗ್‌ನಲ್ಲಿ ಪಳಗುತ್ತಾ ಬಂದ ಸ್ವೀಟಿ, ಹತ್ತು ವರ್ಷಗಳಲ್ಲೇ ದೇಶದ ಕೀರ್ತಿ ಪತಾಕೆಯನ್ನು ಜಾಗತಿಕ ಮಟ್ಟದಲ್ಲಿ ಹಾರಿಸಿದರು. ರಷ್ಯಾದಲ್ಲಿ ನಡೆದ ಉಮಾಖನೊವ್ ಸ್ಮಾರಕ ಟೂರ್ನಿಯಲ್ಲಿ ಚಿನ್ನ ಗೆದ್ದರು. ಇಂಡಿಯಾ ಓಪನ್ ಟೂರ್ನಿಯ ಉದ್ಘಾಟನಾ ಕಂತಿನಲ್ಲೇ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದ್ದರು. ಕಜಕಿಸ್ತಾನದ ಸ್ಟ್ರಾಂಡ್‌ಜಾ ಕಪ್‌ನಲ್ಲಿ ಕಂಚು ಅವರಿಗೆ ಒಲಿದಿತ್ತು. 2014ರಲ್ಲಿ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ತಮ್ಮದಾಗಿಸಿಕೊಂಡು ಆತ್ಮವಿಶ್ವಾಸದ ಹಳಿಗೆ ಮರಳಿದ್ದರು. 2023ರಲ್ಲಿ ಐಬಿಎ ಮಹಿಳಾ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕವನ್ನು ಗೆದ್ದು, ಅವರು ಬಾಕ್ಸಿಂಗ್ ಕುರಿತ ತಮ್ಮ ಬದ್ಧತೆಯನ್ನು ತೋರಿದ್ದರು.

ಸ್ವೀಟಿ ಹುಟ್ಟಿದ್ದು ಹಿಸಾರ್‌ನಲ್ಲಿ. ತಂದೆ ಮಹೇಂದರ್ ಸಿಂಗ್ ರಾಷ್ಟ್ರೀಯ ತಂಡದಲ್ಲಿ ಬ್ಯಾಸ್ಕೆಟ್‌ಬಾಲ್ ಆಟಗಾರರಾಗಿದ್ದವರು. ಚಿಕ್ಕ ಮಗಳು ಸಿವಿ ಬೂರಾಗೂ ಬಾಕ್ಸಿಂಗ್ ಆಡುವಂತೆ ಇದೇ ತಂದೆ ಪ್ರೇರಣೆ ನೀಡಿದ್ದರು. ಆದರೆ, ಹೆಚ್ಚಿನ ಸಾಧನೆ ಮಾಡಿದ್ದು ಅಕ್ಕ.

ಸ್ವೀಟಿ ದೇಹದ ಸಹಜ ತೂಕ 72 ಕೆ.ಜಿ. ಇತ್ತು. ಆದರೆ, ಅವರು 81 ಕೆ.ಜಿ. ಲೈಟ್‌ಹೆವಿವೇಟ್ ವಿಭಾಗದಲ್ಲಿ ಸ್ಪರ್ಧಿಸುತ್ತಿದ್ದರು. ಇದಕ್ಕಾಗಿ ಅವರು ಮಾಡಿಕೊಳ್ಳುತ್ತಿದ್ದ ಹೊಂದಾಣಿಕೆಯಲ್ಲಿ ಕಠಿಣವಾದ ಪಥ್ಯಾಹಾರ ಕ್ರಮವಿತ್ತು. ಚೀನಾದ ಯಾಂಗ್ ಷಿಯೋಲಿ ಎದುರು 2014ರಲ್ಲಿ ಸಾಕಷ್ಟು ಹೋರಾಟ ತೋರಿದ ನಂತರ ಸೋಲುಂಡು, ವಿಶ್ವ ಚಾಂಪಿಯನ್ ಆಗಲು ಆಗಿರಲಿಲ್ಲ. ಅದರ ಮರು ವರ್ಷ ಏಷ್ಯಾ ಮಹಿಳೆಯರ ಅಮೆಚ್ಯೂರ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕೂಡ ಬೆಳ್ಳಿ ಪದಕವನ್ನಷ್ಟೆ ಗೆಲ್ಲಲು ಸಾಧ್ಯವಾಗಿತ್ತು.

ದೀರ್ಘಕಾಲದಿಂದ ಬಾಕಿ ಇದ್ದ ಚಿನ್ನದ ಪದಕ ಗೆಲ್ಲುವ ಕನಸು ನನಸಾಗಿದ್ದು 2023ರಲ್ಲಿ. ಅದರ ಮುಂದಿನ ವರ್ಷವೇ ಸ್ವೀಟಿ ಬದುಕು ರಾಜಕೀಯ ತಿರುವು ಪಡೆದುಕೊಂಡಿತು. ಅವರು ಕಳೆದ ವರ್ಷ ಫೆಬ್ರುವರಿಯಲ್ಲಿ ಅಧಿಕೃತವಾಗಿ ಬಿಜೆಪಿ ಸೇರಿದರು. ಜೊತೆಯಲ್ಲಿ ಅವರ ಪತಿ ದೀಪಕ್ ಹೂಡಾ ಕೂಡ ಇದ್ದರು.

2022ರಲ್ಲಿ ದೀಪಕ್ ಅವರನ್ನು ಸ್ವೀಟಿ ಮದುವೆಯಾದರು. ದೀಪಕ್ ಕಬಡ್ಡಿ ಆಟಗಾರ. ಇಬ್ಬರೂ ಅರ್ಜುನ ಪ್ರಶಸ್ತಿ ಪುರಸ್ಕೃತರು. ಇಡೀ ಕುಟುಂಬ ಒಂದು ಬಗೆಯಲ್ಲಿ 'ಸ್ಪೋರ್ಟಿ ಆಗಿತ್ತು' ಎಂದೇ ಅನೇಕರು ಭಾವಿಸಿದ್ದರು.

ಉತ್ತಿದ್ದ ಭೂಮಿಯ ಮೇಲೆ ಪಾದಗಳನ್ನು ಊರಿ ಬಾಕ್ಸಿಂಗ್ ಪಟ್ಟುಗಳನ್ನು ಕಲಿತಿದ್ದ ಸ್ವೀಟಿ ಇತ್ತೀಚೆಗೆ ಪೊಲೀಸ್ ಠಾಣೆಯ ಮೆಟ್ಟಿಲಿನ ಮೇಲೆ ಅದೇ ಪಾದಗಳನ್ನಿಟ್ಟರು. ತಮ್ಮ ಪತಿ ಹಾಗೂ ಆತನ ಪೋಷಕರು ವರದಕ್ಷಿಣೆಗಾಗಿ ತಮ್ಮನ್ನು ಪೀಡಿಸುತ್ತಿದ್ದಾರೆ ಎಂದು ದೂರು ನೀಡಿದರು. ಎಫ್‌ಐಆರ್ ಕೂಡ ದಾಖಲಾಯಿತು.

ತರುವಂತೆ ತಮ್ಮ ಮೇಲೆ ಒತ್ತಡ ಹಾಕಿದರು. ದೈಹಿಕವಾಗಿಯೂ ಹಿಂಸಿಸಿದರು ಎಂದು ಸ್ವೀಟಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ ಎನ್ನಲಾಗಿದೆ.

ಇದುವರೆಗೆ ಪೊಲೀಸರು ಎರಡು ಮೂರು ನೋಟಿಸ್‌ಗಳನ್ನು ನೀಡಿದ್ದರೂ (ಫೆಬ್ರುವರಿ 28ರ ವರೆಗೆ) ದೀಪಕ್ ಠಾಣೆಗೆ ಹಾಜರಾಗಿರಲಿಲ್ಲ. ತಾವು ಮಾನಸಿಕ ಆಘಾತಕ್ಕೆ ಒಳಗಾಗಿದ್ದು, ಆರೋಗ್ಯ ಸ್ಥಿತಿ ಸರಿಯಿಲ್ಲದ ಕಾರಣ ಹಾಜರಾಗಿಲ್ಲ ಎಂದು ಅವರು ವೈದ್ಯಕೀಯ ಪ್ರಮಾಣಪತ್ರವನ್ನು ಕಳುಹಿಸಿರುವುದಾಗಿ ಅಷ್ಟೆ ಪ್ರತಿಕ್ರಿಯಿಸಿದರು.

ಹರಿಯಾಣದಲ್ಲಿ ಕ್ರೀಡಾ ಹುರಿಯಾಳುಗಳು



ಏಷ್ಯನ್ ಕಂಚಿನ ಪದಕ ವಿಜೇತ ಕಬಡ್ಡಿ ಆಟಗಾರ ಎನಿಸಿರುವ ದೀಪಕ್ ಹೂಡಾ ಮದುವೆಯಾದ ಕೆಲವೇ ದಿನಗಳಲ್ಲಿ ಫಾರ್ಚೂನರ್ ಕಾರು ಕೊಡಿಸುವಂತೆ ಸ್ವೀಟಿ ಪೋಷಕರಿಗೆ ದುಂಬಾಲು ಬಿದ್ದಿದ್ದರು. ಅದನ್ನು ಕೊಡಿಸಿದ ಮೇಲೂ ಅವರ ಬೇಡಿಕೆ ನಿಲ್ಲಲಿಲ್ಲ ಎಂಬ ಅಂಶ ದೂರಿನಲ್ಲಿದೆ. ಭಾರತೀಯ ನ್ಯಾಯಸಂಹಿತೆಯ ಸೆಕ್ಷನ್ 85ರ ಅಡಿ ಪ್ರಕರಣ ದಾಖಲಾಗಿದೆ.

2024ರಲ್ಲಿ ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಮಹಮ್ ಕ್ಷೇತ್ರದಿಂದ ದೀಪಕ್ ಹೂಡಾ ಸ್ಪರ್ಧಿಸಿ, ಸೋಲುಂಡಿದ್ದರು. 2016ರಲ್ಲಿ ನಡೆದ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದ ಭಾರತ ತಂಡದಲ್ಲಿ ದೀಪಕ್ ಕೂಡ ಆಡಿದ್ದರು. ಅಷ್ಟೇ ಅಲ್ಲ, ಪ್ರೊ ಕಬಡ್ಡಿ ಲೀಗ್ ನೋಡುವವರಿಗೂ ಅವರ ಹೆಸರು ಚಿರಪರಿಚಿತ.

ಚುನಾವಣೆಗೆ ಸ್ಪರ್ಧಿಸಿದಾಗ ಅದರ ಖರ್ಚಿಗೆಂದು ದೊಡ್ಡ ಮೊತ್ತದ ಹಣ ಸಾಕಷ್ಟು ಸಂಕಷ್ಟದ ಹಾದಿಯನ್ನು ಸವೆಸಿ ತಯಾರಾಗುತ್ತಾ ಬಂದಿದ್ದಾರೆ. ಅಂಥವರ ಸಾಲಿನಲ್ಲಿ ಸ್ವೀಟಿ ಹಾಗೂ ದೀಪಕ್ ಕೂಡ ನಿಲ್ಲುತ್ತಾರೆ. ಇಬ್ಬರೂ ಆದರ್ಶಕ್ಕೆ ಮಾದರಿಯಾಗಿದ್ದವರು. ಈಗ ರಾಜಕೀಯ ಪಡಸಾಲೆಗೆ ಪ್ರವೇಶ ಮಾಡುತ್ತಿದ್ದಂತೆ ಬದುಕಿನ ತಾಳ ತಪ್ಪಿರುವುದು ಸ್ಪಷ್ಟವಾಗಿದೆ.

ಭಾರತದ ಕುಸ್ತಿಪಟುಗಳು ತಮ್ಮ ಮೇಲೆ ನಡೆದ ದೌರ್ಜನ್ಯಗಳಿಗೆ ಉತ್ತರ ಬೇಕೆಂದು ತಿಂಗಳುಗಟ್ಟಲೆ ನವದೆಹಲಿಯಲ್ಲಿ ಪ್ರತಿಭಟನೆ ನಡೆಸಿದ ಚಿತ್ರಣ ಇನ್ನೂ ಮಾಸಿಲ್ಲ. ಭಾರತೀಯ ಕುಸ್ತಿ ಫೆಡರೇಷನ್ ಕಚೇರಿಯು ಆರೋಪಕ್ಕೆ ಒಳಗಾಗಿದ್ದ ಬ್ರಿಜ್ ಭೂಷಣ್ ಸಿಂಗ್ ಅವರ ಮನೆಯಲ್ಲಿಯೇ ಮೊನ್ನೆ ಮೊನ್ನೆವರೆಗೂ ಇದ್ದುದು ಸುದ್ದಿಯಾಗಿತ್ತು.

ಈಗ ಸ್ವೀಟಿ ಹೇಳಿರುವ ವರದಕ್ಷಿಣೆ ಕಿರುಕುಳದ ಅನುಭವಗಳು ಹೊಸ ಕಾಲದ ಸಾಧಕರ ನಡಾವಳಿಗಳ ಕುರಿತೂ ಪ್ರಶ್ನೆಗಳನ್ನು ಹುಟ್ಟುಹಾಕಿವೆ.

ಪ್ರತಿಕ್ರಿಯಿಸಿ: feedback@sudha.co.in